ಗೊಂಡಂತೆ 25 ಪ್ರಾಥಮಿಕ ಆರೋಗ್ಯ ಕೇಂದ್ರಗಳ 100 ಉಪಕೇಂದ್ರದ ಹಳ್ಳಿಗಳಿಗೆ ಸಿಂಪಡಣಾ ಕಾರ್ಯ ಪ್ರಾರಂಭಿಸಲಾಗಿದೆ.

7. ಹಾಸನ ಜಿಲ್ಲೆಗೆ ಸಾಕಷ್ಟು ಸಂಖ್ಯೆಯಲ್ಲಿ ಮಲೇರಿಯ ನಿರೋಧಕ ಗುಳಿಗೆಗಳನ್ನು ಸರಬರಾಜು ಮಾಡಲಾಗಿದೆ.

8. ಜನರಲ್ಲಿ ಮಲೇರಿಯ ರೋಗದ ಬಗ್ಗೆ ತಿಳುವಳಿಕೆ ಮೂಡಿಸಲು ಜೂನ್ ತಿಂಗಳ ಎರಡನೇ ವಾರದಲ್ಲಿ ಮಲೇರಿಯ ಸಪ್ತಾಹವನ್ನು ಆಚರಿಸಲಾಯಿತು.

9. 14 ಜನ ಕಿರಿಯ ಪ್ರಯೋಗಶಾಲಾ ತಂತ್ರಜ್ಞರನ್ನು ಹೊಸದಾಗಿ ಹಾಸನ ಜಿಲ್ಲೆಗೆ ನೇಮಕ ಮಾಡಲಾಗಿದೆ.

ವಿಷಯ:- ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿಸಲು ಹಣ ಒದಗಿಸುವುದು.

1338 (2076) **ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):-** ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಎಲ್ಲಾ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿಸಲು ಹಣ ಒದಗಿಸಿ ಕೊಡಲಾಗುತ್ತಿದೆಯೇ?

ಆ) ರಾಜ್ಯದಲ್ಲಿ ಎಲ್ಲಾ ಗ್ರಂಥಾಲಯಗಳಿಗೆ ಉರ್ದು ಪುಸ್ತಕಗಳನ್ನು ಖರೀದಿಸಲು ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಿದೆ?

ಇ) ರಾಜ್ಯದಲ್ಲಿ ಯಾವ ಯಾವ ಗ್ರಂಥಾಲಯಗಳಲ್ಲಿ ಉರ್ದು ಪುಸ್ತಕಗಳನ್ನು ಇಡಲಾಗಿದೆ (ರಾಜ್ಯದ ಎಲ್ಲಾ ಗ್ರಂಥಾಲಯಗಳ ವಿವರ ನೀಡುವುದು)?

ಈ) 1994-95ನೇ ಮತ್ತು 1995-96ನೇ ಸಾಲಿನಲ್ಲಿ ಉರ್ದು ಪುಸ್ತಕಗಳನ್ನು ಖರೀದಿಸಲು ಖರ್ಚು ಆಗಿರುವ ಹಣವೆಷ್ಟು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು):-

ಅ) ಹೌದು

ಆ) ಉರ್ದು ಭಾಷೆಯ ಜನರು ಹೆಚ್ಚಾಗಿರುವ ಜಿಲ್ಲೆಗಳಿಗೆ ಗ್ರಂಥ ಖರೀದಿಗೆ ಮೀಸಲಿಟ್ಟ ಒಟ್ಟು ಹಣದಲ್ಲಿ ಶೇ. 10ರಷ್ಟನ್ನು ಅಂದರೆ ಒಟ್ಟು (ರೂ. 22.5 ಲಕ್ಷ) ರೂ.ಗಳನ್ನು ಇತರ ಭಾಷೆಯ (ಉರ್ದು, ತೆಲುಗು, ತಮಿಳು ಇತ್ಯಾದಿ) ಗ್ರಂಥ ಖರೀದಿಗೆ ಬಿಡುಗಡೆ ಮಾಡಲಾಗಿದೆ.

ಇ) ರಾಜ್ಯದ ಈ ಕೆಳಗಿನ ಗ್ರಂಥಾಲಯಗಳಲ್ಲಿ ಉರ್ದು ಪುಸ್ತಕಗಳನ್ನು ಇಡಲಾಗಿದೆ.

1) ನಗರ ಕೇಂದ್ರ ಗ್ರಂಥಾಲಯ, ಬೆಳಗಾಂ

2) ಬೆಂಗಳೂರು ನಗರ ಕೇಂದ್ರ ಗ್ರಂಥಾಲಯದ ಎಲ್ಲಾ ವಲಯಗಳು

3) ಬೆಂಗಳೂರು ನಗರ ಜಿಲ್ಲಾ ಕೇಂದ್ರ ಗ್ರಂಥಾಲಯ

4) ನಗರ ಕೇಂದ್ರ ಗ್ರಂಥಾಲಯ ಹಾಗೂ ಜಿಲ್ಲಾ ಕೇಂದ್ರ ಗ್ರಂಥಾಲಯ, ಗುಲ್ಬರ್ಗಾ

5) ಜಿಲ್ಲಾ ಕೇಂದ್ರ ಗ್ರಂಥಾಲಯ, ಬೀದರ್

6) ನಗರ ಕೇಂದ್ರ ಗ್ರಂಥಾಲಯ, ಮಂಗಳೂರು.

7) ಜಿಲ್ಲಾ ಕೇಂದ್ರ ಗ್ರಂಥಾಲಯ, ಚಿಕ್ಕಮಗಳೂರು

8) ಜಿಲ್ಲಾ ಕೇಂದ್ರ ಗ್ರಂಥಾಲಯ, ಶಿವಮೊಗ್ಗ

9) ಜಿಲ್ಲಾ ಕೇಂದ್ರ ಗ್ರಂಥಾಲಯ, ಕೋಲಾರ

10) ಜಿಲ್ಲಾ ಕೇಂದ್ರ ಗ್ರಂಥಾಲಯ, ರಾಯಚೂರು

11) ನಗರ ಕೇಂದ್ರ ಗ್ರಂಥಾಲಯ, ದಾವಣಗೆರೆ

12) ರಾಜ್ಯ ಕೇಂದ್ರ ಗ್ರಂಥಾಲಯ, ಬೆಂಗಳೂರು.

ಈ) ರಾಜ್ಯದ ಎಲ್ಲಾ ಗ್ರಂಥಾಲಯಗಳು ಸೇರಿ 1994-95ನೇ ಸಾಲಿನಲ್ಲಿ 3815 ಗ್ರಂಥಗಳಿಗಾಗಿ ರೂ. 1,37,091-00ಗಳನ್ನು ಭರಿಸಲಾಗಿದ್ದು, ಅದೇ ರೀತಿ 1995-96ನೇ ಸಾಲಿನಲ್ಲಿ 9066 ಗ್ರಂಥ-ಗಳಿಗಾಗಿ ರೂ. 3,28,100-00ಗಳನ್ನು ಭರಿಸಲಾಗಿದೆ.

ವಿಷಯ:- ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿರತೆ ಮತ್ತು ಆನೆ ಹಾವಳಿಯಿಂದ ಉಂಟಾದ ಹಾನಿ

1339 (2075) **ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):-** ಮಾನ್ಯ ಅರಣ್ಯ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿರತೆ ಮತ್ತು ಆನೆ ಹಾವಳಿಯಿಂದ ಜನರ ಪ್ರಾಣ ಹಾನಿ-ಯಾಗಿರುವ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) 1994-95, 1995-96 ನೇ ಸಾಲಿನಲ್ಲಿ ಎಷ್ಟು ಜನರ ಪ್ರಾಣ ಹಾನಿಯಾಗಿದೆ?

ಇ) ಹಾನಿಯಾಗಿರುವ ವ್ಯಕ್ತಿಗಳಿಗೆ ಸರ್ಕಾರ ಪರಿಹಾರ ನೀಡಿದೆಯೇ?

ಈ) ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚಿರತೆ ಮತ್ತು ಆನೆ ಹಾವಳಿಯಿಂದ ಜೀವನ ಹಾನಿ-ಯಾಗುತ್ತಿರುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ಹೌದು

ಆ)

	ಕಾಡಾನೆಯಿಂದ	ಚಿರತೆಯಿಂದ
1994-95	4	ಇಲ್ಲ